ನನ್ನ ಹೆಗ್ಗಳಿಕೆ. ಕ್ಷೌರದ ಕತ್ತಿಯ ಸರಾಗ ಓಡಾಟದಿಂದ ಟಾರೆಸ್ ಯೌವನ ಪಡೆದಂತಾದ. ಯಾಕೆಂದರೆ, ನಾನು ಅತ್ಯುತ್ತಮ ಕ್ಷೌರಿಕನಾಗಿದ್ದೆ- ಅದೂ ಈ ಪಟ್ಟಣದಲ್ಲೇ.

ಈಗ ಮತ್ತೊಮ್ಮೆ ಇನ್ನೊಂದಷ್ಟು ನೊರೆ ಹಚ್ಚಬೇಕು. ಅದು ಗದ್ದದ ಕೆಳಗೆ ಹಾಗೂ ರಕ್ತನಾಳದ ಮೇಲೆ. ಅದು ಎಷ್ಟು ಬಿಸಿಯಾಗಿದ್ದೀತು?!

ಟಾರೆಸ್ ಬೆವರುತ್ತಿದ್ದಾನೆ ಅನಿಸಿತು. ಆದರೆ, ಆತ ಹೆದರಿಲ್ಲ; ನಿರುಮ್ಮಳನಾಗಿ ಕೂತಿದ್ದ. ಇವತ್ತು ಸಂಜೆ ಬಂದಿಗಳನ್ನು ಏನು ಮಾಡಬಹುದು ಎಂಬ ಯೋಚನೆಯನ್ನು ಸಹ ಆತ ಮಾಡುತ್ತಿರಲಿಲ್ಲ. ಇನ್ನೊಂದೆಡೆ ಹರಿತ ಕತ್ತಿ ಹಿಡಿದುಕೊಂಡಿದ್ದ ನಾನು ಏನನ್ನೂ ಸ್ಪಷ್ಟವಾಗಿ ಯೋಚಿಸಲು ಸಾಧ್ಯವಾಗದೇ ಗೊಂದಲದಲ್ಲಿ ಮುಳುಗಿ, ಚರ್ಮವನ್ನು ನುಣುಪುಗೊಳಿಸುತ್ತ ಯಾವುದೇ ಕಾರಣಕ್ಕೂ ಚಿಕ್ಕ ಗಾಯವಾಗದಂತೆ ಜಾಗರೂಕತೆಯಿಂದ ಕೆಲಸ ಮಾಡುತ್ತಿದ್ದೆ.

ಈತ ಯಾಕಾದರೋ ನನ್ನಲ್ಲಿಗೆ ಬಂದನೋ? ನಾನೇನೂ ಕೊಲೆಗಾರನಲ್ಲ; ಬಂಡಾಯಗಾರ ಅಷ್ಟೇ. ಈಗ ನನ್ನ ಕೈಗೆ ಸುಲಭವಾಗಿ ಸಿಕ್ಕಿರುವ ಆತನನ್ನು ನಾನು ಎಷ್ಟೊಂದು ಸುಲಭವಾಗಿ ಕೊಲ್ಲಬಹುದಲ್ಲ! ಅದಕ್ಕೆ ಆತ ಅರ್ಹ.

ಇಲ್ಲ! ಇಲ್ಲ! ಥೇ, ಇದೆಂಥ ದುಷ್ಟ ಯೋಚನೆ! ಇನ್ನೊಬ್ಬರ ಒಳಿತಿಗಾಗಿ ಒಬ್ಬನು ತನ್ನತನವನ್ನು ತ್ಯಾಗ ಮಾಡಿ ಕೊಲೆಗಾರನಾಗಬೇಕೇ? ಇದರಿಂದ ನಿನಗೇನು ಸಿಕ್ಕೀತು? ಏನೂ ಇಲ್ಲ! ಒಬ್ಬನ ನಂತರ ಇನ್ನೊಬ್ಬ ಬರುತ್ತಾನೆ; ಮೊದಲಿನವನು ಇನ್ನೊಬ್ಬನನ್ನು ಕೊಲ್ಲುತ್ತಾನೆ; ಈತನನ್ನು ಮತ್ತೊಬ್ಬ ಹತ್ಯೆ ಮಾಡುತ್ತಾನೆ. ರಕ್ತದ ಮಡುವು ದೊಡ್ಡದಾಗುತ್ತ ಹೋಗುತ್ತದೆ. ಈತನ ಕತ್ತನ್ನು ನಾನು ಹರಿತವಾದ ಚಾಕುವಿನಿಂದ ಮಿಂಚಿನ ವೇಗದಲ್ಲಿ ಕತ್ತರಿಸಬಹುದು. ಕಚ್... ಕಚಕ್! ಕಣ್ಣುಮುಚ್ಚಿಕೊಂಡೇ ಕೂತಿರುವುದರಿಂದ ಆತ ತಕರಾರು ಮಾಡಲಿಕ್ಕೂ ಸಾಧ್ಯವಿಲ್ಲ. ಆ ಕ್ಷಣಗಳಲ್ಲಿ ನನ್ನ ಕಣ್ಣಿನ ಹೊಳಪನ್ನೂ, ಹರಿತ ಚಾಕುವಿನ ಅಲಗನ್ನೂ ಆತ ಖಂಡಿತ ನೋಡಲಾರ.

ಯೋಚನೆಗಳ ಹೊಯ್ದಾಟದಲ್ಲಿ ನಾನೀಗ ಅಸಲಿ ಕೊಲೆಗಾರನಂತೆ ನಡುಗುತ್ತಿದ್ದೆ. ಈಗ ಏನಾದೀತು? ಆತನ ಕೊರಳಿನಿಂದ ಧಾರಾಕಾರವಾಗಿ ಹರಿದು ಬರುವ ರಕ್ತವು ಬಟ್ಟೆಯನ್ನೆಲ್ಲ ತೋಯಿಸಿ, ಕುರ್ಚಿ ಮೇಲೆಲ್ಲ ಹರಿದು, ನನ್ನ ಕೈಗಳನ್ನು ಕೆಂಪಾಗಿಸಿ ನೆಲದ ಮೇಲೆ ಮಡುಗಟ್ಟುತ್ತದೆ. ಆಗ ನಾನು ಅಂಗಡಿಯ ಬಾಗಿಲು ಮುಚ್ಚಬೇಕು. ಆದರೂ ಧಾರಾಕಾರ ಸುರಿಯುವ ನೆತ್ತರು ನೆಲದ ಮೇಲಿನಿಂದ ಬಾಗಿಲ ಸಂದಿಯಲ್ಲಿ ನುಸುಳಿ, ಮೆಲ್ಲಗೇ ಹೊರಗೆ ಹರಿಯುತ್ತ ಬೀದಿಯಲ್ಲಿ ಚಿಕ್ಕ ಕೊಳ್ಳವಾಗಿ ಸಾಗುತ್ತದೆ.

ನೊರೆ ಬಳಸಿ, ಹರಿತ ಕತ್ತಿಯಿಂದ ಗಡ್ಡವನ್ನು ತೆಗೆದ ಮೇಲೆ ಆತನ ಕೊರಳು ನುಣುಪಾಗಿದೆ. ಆ ಕತ್ತಿಯಿಂದ ಒಂದೇ ಒಂದು ಸಲ ಆಳವಾಗಿ ಕೊರಳನ್ನು ಸೀಳಿದರೆ ಜೀವ ಬಿಡಲು ಎಷ್ಟು ಹೊತ್ತು? ಅದರಿಂದ ಹೆಚ್ಚೇನೂ ಆತ ನೋವು ಅನುಭವಿಸಲಾರ. ಆದರೆ, ಆ ದೇಹವನ್ನೇನು ಮಾಡುವುದು? ಅದನ್ನೆಲ್ಲಿ ಮುಚ್ಚಿಡುವುದು? ಎಲ್ಲವನ್ನೂ ಎಲ್ಲರನ್ನೂ ತೊರೆದು ಬಹು ದೂರ ಓಡಿ ಹೋಗಬೇಕು. ಅಪರಿಚಿತ ಪ್ರದೇಶದಲ್ಲಿ ಆಶ್ರಯ ಪಡೆಯಬೇಕು. ಆದರೆ, ಅವರು ನನ್ನನ್ನು ಹುಡುಕಿಕೊಂಡು ಬಂದೇ ಬರುತ್ತಾರೆ. "ಕ್ಯಾಪ್ಟನ್ ಟಾರೆಸ್‌ನ ಕೊಲೆಗಾರ. ಕ್ಷೌರ ಮಾಡುವಾಗ ಆತನ ಕತ್ತನ್ನು ಸೀಳಿದ ಹೇಡಿ ಈತ"

ಆಮೇಲೆ ಇನ್ನೊಂದು ಕಡೆ ನನ್ನ ಗುಣಗಾನ. 'ನಮ್ಮೆಲ್ಲರ ರಕ್ಷಕ. ಈತನದು ಚಿರಸ್ಥಾಯಿಯಾದ ಹೆಸರು (ಇಲ್ಲಿ ನನ್ನ ಹೆಸರು ಹೇಳುತ್ತಾರೆ). ಈತ ಪಟ್ಟಣದ ಕುಶಲ ಕ್ಷೌರಿಕ. ನಮ್ಮ ಪರವಾಗಿ ಕೆಲಸ ಮಾಡುತ್ತಿದ್ದ ವ್ಯಕ್ತಿ'. ಇದೆಲ್ಲದರ ಕೊನೆಗೂ ನಾನು ಏನು? ಕೊಲೆಗಾರನೇ? ನಾಯಕನೇ? ನನ್ನ ಬದುಕಿನ ಭವಿಷ್ಯ ನಿಂತಿರುವುದು ಈ ಹರಿತ ಕತ್ತಿಯ ಅಲಗಿನ ಮೇಲೆ! ಇದನ್ನು ಹಿಡಿದ ಕೈಯಿಂದಲೇ ಇನ್ನೊಂದಷ್ಟು ಆಳವಾಗಿ ಒತ್ತಿದರೆ ಆಯಿತು! ಕೊರಳಿನ ಮೃದು ಚರ್ಮವು ಈ ಹರಿತ ಕತ್ತಿಗೆ ರೇಷ್ಮೆ, ರಬ್ಬರಿನಂತೆ ಸುಲಭವಾಗಿ ಹಾದಿ ಮಾಡಿಕೊಡಬಲ್ಲದು. ಮನುಷ್ಯನ ದೇಹದಲ್ಲಿ ಕೊರಳ ಚರ್ಮಕ್ಕಿಂತ ಎಳೆಯ ಭಾಗ ಇನ್ನಾವುದೂ ಇಲ್ಲ. ನೆತ್ತರಂತೂ ಅಲ್ಲಿ ಇದ್ದೇ ಇರುತ್ತದೆ; ಹೊರಗೆ ಬರಲು ಕಾತರಿಸುತ್ತಿರುತ್ತದೆ. ನನ್ನ ಕೈಯಲ್ಲಿರುವ ಹರಿತ ಕತ್ತಿಯು ಯಾವತ್ತೂ ವಿಫಲವಾಗಿದ್ದೇ ಇಲ್ಲ. ನನ್ನ ಕ್ಷೌರಪೆಟ್ಟಿಗೆಯಲ್ಲಿನ ಅತ್ಯಂತ ಶ್ರೇಷ್ಠ ಕತ್ತಿ ಇದು.

ಆದರೆ... ಇಲ್ಲ! ನಾನು ಕೊಲೆಗಾರನಾಗಲಾರೆ, ಸಾಹೇಬರೇ! ಕ್ಷೌರಕ್ಕೆಂದು ನೀವು ಬಂದಿರಿ. ಅದನ್ನು